**PW**–06

**CW**–10

**ದಿನಾಂಕಃ 01.07.2026 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲು ಆರೋಪಿ ಪರ ವಕೀಲರಾದ ಶ್ರೀ ಎಸ್ ಜೆ ಹೆಚ್ ಅವರಿಂದಃ</u>**

1. ನನ್ನ ಗಂಡ ಜಗದೀಶ ನೇತೃತ್ವದಲ್ಲೇ ಜಾತ್ರೆ ನಡೆಯುತ್ತದೆ ಎಂದರೆ ಸರಿ. ನನ್ನ ಗಂಡ ಜಗದೀಶ 10.00 ಸುಮಾರಿಗೆ ಆ ದಿನ ನೀರು ಕುಡಿಯಲು ಮನೆಗೆ ಬಂದಿದ್ದ. ಆ ದಿನ ಬೀಗರು ಇದ್ದರು ಎಂದರೆ ಸರಿ. ವಡ್ಡರ ಓಣಿಯವರು ಸಂಜ 5.00 ಗಂಟೆಗೆ ನೀರು ಬಿಡಲು ನಮ್ಮ ಮನೆಯ ಹತ್ತಿರ ಬಂದು ನನ್ನ ಗಂಡನಿಗೆ ಕೇಳಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಗಂಡ ಹಾಗೂ ವಡ್ಡರ ಓಣಿಯವರ ಮಧ್ಯೆ ಜಗಳ ಆಗಿತ್ತು ಎಂದರೆ ಸರಿಯಲ್ಲ.
2. ಆ ಸಮಯದಲ್ಲಿ ನನ್ನ ಗಂಡ ಆರೋಪಿತರು ವಾಹನಗಳನ್ನು ಹಿಡಿದಿಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಶೈಲಾ ವಡ್ಡರ ನನ್ನ ಗಂಡ ಹಾಗೂ ಮಕ್ಕಳ ಮೇಲೆ ಸದರಿ ಜಗಳದಿಂದಾಗಿ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರನ್ನು ಘಟನೆಯ ದಿನವೇ ನೋಡಿರುತ್ತೇನೆ.
3. ಜಾತ್ರೆಯ ಮೆರವಣಿಗೆ ಇದ್ದ ಕಾರಣ ಇಡೀ ಊರ ಜನ ನಮ್ಮ ಮನೆಯ ಹತ್ತಿರ ಸೇರಿದ್ದರು ಎಂದರೆ ಸರಿ. ನೂರಾರು ಜನ ಇದ್ದರು ಎಂದರೆ ಸರಿ. ಆ ದಿನ ಯಾವುದೇ ಘಟನೆ ಆಗಿಲ್ಲ , ಆರೋಪಿತರು ನನ್ನ ಗಂಡನ ಮೇಲೆ ಹಲ್ಲೆ ಮಾಡಿಲ್ಲ , ನನ್ನ ಕೈ ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ.
4. ಆರೋಪಿತರು ಅವಾಚ್ಚ ಶಬ್ದಗಳಿಂದ ನನ್ನ ಗಂಡನನ್ನು ಬೈದರು ಹಾಗೂ ಕೈ ಹಿಡಿದು ಎಳೆದಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಗಾಡಿಗಳು ಎಂತಹ ಗಾಡಿಗಳಾಗಿದ್ದವು ಹಾಗೂ ಅವುಗಳ ಬಣ್ಣ ನನಗೆ ಹೇಳಲು ಆಗುವುದಿಲ್ಲ. ಚಾಕು ಇದ್ದ ಬ್ಯಾಗ ಕೀ ಇರದ ಬ್ಯಾಗ ಆಗಿತ್ತು. ಚಾಕುವನ್ನು ಬ್ಯಾಗನಲ್ಲಿ ನೋಡಿರುತ್ತೇನೆ. ನಾನು ಸದರಿ ಚಾಕುವನ್ನು ಮಾರನೇ ದಿನ ಬೆಳಿಗ್ಗೆ ನೋಡಿರುತ್ತೇನೆ.

5. ನಾನು ನನ್ನ ಗಂಡನನ್ನು ಚಪ್ಪಲಿಯಿಂದ ಹೊಡೆಯುತ್ತಿದ್ದರು ಎಂದು ಹೇಳಿರುವುದಿಲ್ಲ. ನಾನು ಆರೋಪಿತರು ನನ್ನ ಕೈ ಹಿಡಿದು ಎಳೆದಾಡಿದ ಕಾರಣ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡಿಲ್ಲ.
6. ನಮ್ಮ ಊರಿನವರು ಸೇರಿ ವಡ್ಡರ ಮೇಲೆ ಕೇಸ್ ಮಾಡಬೇಕೆಂದು ಈ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.
7. ಆರೋಪಿತರಿಂದ ನನ್ನ ಗಂಡನಿಗೆ ರಕ್ತಗಾಯ ಆದ ಕಾರಣ ಅವರ ವಿರುದ್ಧ ದೂರು ಕೊಡಲು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
8. ಆರೋಪಿತರು ಹೋದ ಮೇಲೆ ಬೈಕನಲ್ಲಿ ಏನು ಇದೆ ಎಂದು ನೋಡಲು ಹೋದಾಗ ಚಾಕು ಮತ್ತು ಕಂದಲಿ ಇತ್ತು ಎಂದು ನ್ಯಾಯಿಕ ದಂಡಾದಿಕಾರಿಗಳಮುಂದೆ ಹೇಳಿಕೆ ಕೊಟ್ಟಿರುತ್ತೆನೆ ಎಂದರೆ ಸರಿ.
9. ಆರೋಪಿತರು ನನ್ನ ಗಂಡನಿಗೆ ಯಾವುದೇ ತೊಂದರೆ ಕೊಡದೇ ಇದ್ದರೂ ಸಹ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆಸ ರಿಯಲ್ಲ.
10. ಆರೋಪಿತರು ನಮ್ಮ ಮೇಲೆ ಎಲ್ಲಿ ಪ್ರಕರಣ ದಾಖಲಿಸುತ್ತಾರೋ ಎಂದು ಹೆದರಿ ಸದರಿಯವರ ಮೇಲೆ ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನ ಮೇಲೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ. ಸರಿ ಇದೆ.**

**(ಅಶ್ವಿನಿ ವಿಜಯ ಶಿರಿಯಣ್ಣನವರ)**
**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಎಫ್.ಟಿ.ಎಸ್.ಸಿ.-1, ಹಾವೇರಿ**